ಕಾರಣವೇನು; ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಇ) ಮಾಹಿತಿ ಬಾಂಡ್ ಸಂಗ್ರಹದ ಪ್ರಗತಿಯನ್ನು ತಿಳಿಸಿರಿ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿ):

ಅ) ಹೌದು.

ಆ) ದಿನಾಂಕ 25/03/2000ರಂದು ನೀಡಲಾಗಿದೆ.

ಇ) 300/- ಕೋಟಿ ರೂ.ಗಳ ಸಂಗ್ರಹ ಮಾಡಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ದೆಹಲಿಯಲ್ಲಿರುವ ಕರ್ನಾಟಕ ಭವನದ ಅವ್ಯವಸ್ಥೆಗಳ ಬಗ್ಗೆ.

2310(2978)

ಶ್ರೀ ಯು.ಆರ್.ಸಭಾಪತಿ(ಉಡುಪಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೆಹಲಿಯಲ್ಲಿರುವ ಕರ್ನಾಟಕ ಭವನದ ಅವ್ಯವಸ್ಥೆಗಳ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ನೀಡಿದ ವರದಿಯ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ದೆಹಲಿ ಕರ್ನಾಟಕ ಭವನದಲ್ಲಿ ಈಗ ವಿವಿಧ ಹುದ್ದೆಗಳಲ್ಲಿರುವ ಕನ್ನಡಿಗರು ಮತ್ತು ಹೊರ ರಾಜ್ಯದ ಸಿಬ್ಬಂದಿಗಳ ಸಂಖ್ಯೆ ಎಷ್ಟು ಕರ್ನಾಟಕ ರಾಜ್ಯದಿಂದ ಹೊರತುಪಡಿಸಿ ಅನ್ಯ ರಾಜ್ಯದಿಂದ ಬಂದವರಿಗೆ ಕರ್ನಾಟಕ ಭವನದಲ್ಲಿ ನೇಮಕಾತಿಗ ಅವಕಾಶವಿದೆಯೇ; ಇದರಿಂದಾಗಿ ರಾಜ್ಯದ ಜನತೆಗೆ ಅವಮಾನ ಆಗಿಲ್ಲವೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ನೀಡಿರುವ ವರದಿಯಲ್ಲಿ ಸೂಚಿಸಿರುವಂತೆ ಕರ್ನಾಟಕ ಭವನದಲ್ಲಿ ಸುಧಾರಣಾ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಆ) 97 ಮಂದಿ ಕನ್ನಡಿಗರು ಹಾಗೂ ಹೊರ ರಾಜ್ಯದವರು 72 ಮಂದಿ ನೌಕರರಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಮಾಡಲಾದ ಬಹುತೇಕ ನೇಮಕಾತಿಗಳನ್ನು ಕನ್ನಡಿಗರಿಗೆ ಮಾತ್ರ ಮಾಡಲಾಗಿದೆ. ಅನುಕಂಪದ ಆಧಾರದ ಮೇಲೆ ಮಾತ್ರ ಕೆಲವು ಪ್ರಕರಣಗಳಲ್ಲಿ ಇತರರಿಗೆ ನೇಮಕಾತಿ ಮಾಡಲಾಗಿದೆ.